All India Radio: Bangalore
National Bulletin In Kannada
30.09.2025 7.35 hrs.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
30.09.2025 7.35 hrs.
<><><><>
ಮುಖ್ಯಾಂಶಗಳು.

೧. ಎನ್‌ಡಿಎ ಸರ್ಕಾರದಿಂದ ದೇಶದಲ್ಲಿ ಉತ್ತಮ ಆಡಳಿತದ ಹೊಸ ಮಾದರಿ ಅನುಷ್ಠಾನ - ಪ್ರಧಾನಿ ನರೇಂದ್ರ ಮೋದಿ

೨. ನ್ಯೂಯಾರ್ಕ್‌ನಲ್ಲಿ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್, ಕೆನಡಾ ಸಹವರ್ತಿ ಅನಿತಾ ಆನಂದ್ ಭೇಟಿ: ಭಾರತ-ಕೆನಡಾ ಸಂಬಂಧಗಳ ಪುನಃಸ್ಥಾಪನೆಯೆಡೆಗೆ ಪ್ರಮುಖ ಹೆಜ್ಜೆ

೩. ನವದೆಹಲಿಯಲ್ಲಿ ಗಂಗಾ ಪುನರುಜ್ಜೀವನ ಕುರಿತ ೧೬ನೇ ಕಾರ್ಯಪಡೆ ಸಭೆ: ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಅಧ್ಯಕ್ಷತೆ

೪. ೨೦೨೫ರ ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಗುವಾಹಟಿಯಲ್ಲಿ ಇಂದು ಚಾಲನೆ

><><><><

ಎನ್‌ಡಿಎ ಸರ್ಕಾರ ದೇಶದಲ್ಲಿ ಉತ್ತಮ ಆಡಳಿತದ ಹೊಸ ಮಾದರಿಯನ್ನು ಒದಗಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ನವದೆಹಲಿಯ ದೀನ್‌ದಯಾಳ್ ಉಪಾಧ್ಯಾಯ ಮಾರ್ಗದಲ್ಲಿ ಹೊಸದಾಗಿ ನಿರ್ಮಿಸಲಾದ ದೆಹಲಿ ಬಿಜೆಪಿ ಕಚೇರಿಯನ್ನು ನಿನ್ನೆ ಉದ್ಘಾಟಿಸಿ ಮಾತನಾಡಿದ ಪ್ರಧಾನಿ, ಹೊಸ ಜಿಎಸ್‌ಟಿ ಸುಧಾರಣೆಗಳ ಪ್ರಯೋಜನಗಳು ಸಾಮಾನ್ಯ ನಾಗರಿಕರಿಗೆ ತಲುಪುವಂತೆ ನೋಡಿಕೊಳ್ಳಬೇಕೆಂದು ಬಿಜೆಪಿ ಕಾರ್ಯಕರ್ತರನ್ನು ಒತ್ತಾಯಿಸಿದರು. ಎನ್‌ಡಿಎ ಸರ್ಕಾರ ದೇಶ ಮತ್ತು ಅದರ ನಾಗರಿಕರ ಭದ್ರತೆಗೆ ಹೆಚ್ಚಿನ ಆದ್ಯತೆಯನ್ನು ನೀಡಿದೆ. ದೇಶವನ್ನು ಪ್ರಮುಖ ಹಗರಣಗಳಿಂದ ಮುಕ್ತಗೊಳಿಸುವ ಮೂಲಕ ಭ್ರಷ್ಟಾಚಾರದ ವಿರುದ್ಧದ ನಿರ್ಣಾಯಕ ಯುದ್ಧದಲ್ಲಿ ವಿಶ್ವಾಸವನ್ನು ತುಂಬಲಾಗಿದೆ ಎಂದು ಅವರು ಹೇಳಿದರು.

ಧ್ವನಿ : ಪ್ರಧಾನಿ ನರೇಂದ್ರ ಮೋದಿ (೨೬ ಸೆಕೆಂಡ್ಸ್)

><><><><

ನ್ಯೂಯಾರ್ಕ್‌ನಲ್ಲಿ ನಿನ್ನೆ ಕೇಂದ್ರ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಕೆನಡಾದ ವಿದೇಶಾಂಗ ಸಚಿವರಾದ ಅನಿತಾ ಆನಂದ್ ಅವರನ್ನು ಭೇಟಿಯಾದರು. ಭಾರತ ಮತ್ತು ಕೆನಡಾ ನಡುವಿನ ಸಂಬಂಧಗಳ ಪುನರ್ ಸ್ಥಾಪನೆಯತ್ತ ಇದೊಂದು ಮಹತ್ವದ ಹೆಜ್ಜೆಯಾಗಿದೆ. ಭೇಟಿಯ ವೇಳೆ ಇತ್ತೀಚಿನ ಉನ್ನತ ಆಯುಕ್ತರ ನೇಮಕವನ್ನು ಸ್ವಾಗತಾರ್ಹ ಹೆಜ್ಜೆಯೆಂದು ಬಣ್ಣಿಸಿದ ಡಾ.ಜೈಶಂಕರ್, ಇದರಿಂದ ಎರಡು ದೇಶಗಳ ಕಾರ್ಯತಂತ್ರದ ಸಂಬಂಧಗಳು ಬಲಗೊಳ್ಳಲಿವೆ ಎಂದರು. ಈ ಸಭೆ,

ನ್ಯೂಯಾರ್ಕ್‌ನಲ್ಲಿ ನಡೆಯುತ್ತಿರುವ ೮೦ನೇ ವಿಶ್ವಸಂಸ್ಥೆ ಸಾಮಾನ್ಯ ಸಭೆ ಯುಎನ್‌ಜಿಎಯ ನೇಪಥ್ಯದಲ್ಲಿ ಜೈಶಂಕರ್ ಅವರು ನಡೆಸುತ್ತಿರುವ ಪ್ರಮುಖ ಉನ್ನತ ಮಟ್ಟದ ಸಭೆಗಳ ಭಾಗವಾಗಿದೆ. ಸಾಮಾನ್ಯ ಸಭೆಯಲ್ಲಿ ಸಚಿವ ಜೈಶಂಕರ್, ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಚರ್ಚೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಅವರು ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಅಂಟೋನಿಯೊ ಗುಟೆರಸ್ ಮತ್ತು ಸೌದಿ ಅರೇಬಿಯಾದ ವಿದೇಶಾಂಗ ಸಚಿವ ಪ್ರಿನ್ಸ್ ಫೈಸಲ್ ಬಿನ್ ಫರ್ಹಾನ್ ಅವರೊಂದಿಗೂ ಮಹತ್ವದ ಮಾತುಕತೆ ನಡೆಸಿದ್ದಾರೆ. ಅಭಿವೃದ್ಧಿಯ ಹೃದಯದಲ್ಲಿ - ನೆರವು, ವ್ಯಾಪಾರ ಮತ್ತು ತಂತ್ರಜ್ಞಾನ" ಎಂಬ ವಿಷಯದ ಚರ್ಚೆಯಲ್ಲಿ ಮಾತನಾಡಿದ ಡಾ.ಜೈಶಂಕರ್, ಇಂದಿನ ಬೆಳವಣಿಗೆಗಳಿಗೆ ಪ್ರತಿಕ್ರಿಯೆ ನೀಡಲು ತಂತ್ರಜ್ಞಾನ, ಆತ್ಮನಿರ್ಭರತೆ ಮತ್ತು ಸಹಕಾರ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು. ಜಾಗತಿಕ ಮಟ್ಟದಲ್ಲಿ ಸಮಕಾಲೀನ ಮತ್ತು ಪರಿಣಾಮಕಾರಿ ಮಾದರಿಯ ಜಾಗತಿಕ ಕಾರ್ಯಪಡೆಯನ್ನು ಹೇಗೆ ರೂಪಿಸಬೇಕು ಎಂಬುದು ಅಂತಾರಾಷ್ಟ್ರೀಯ ಆರ್ಥಿಕತೆಗೆ ಎದುರಾಗಿರುವ ದೊಡ್ಡ ಪ್ರಶ್ನೆಯಾಗಿದೆ ಎಂದು ಜೈಶಂಕರ್ ಅಭಿಪ್ರಾಯಪಟ್ಟರು.

><><><><

ನವದೆಹಲಿಯಲ್ಲಿ ನಿನ್ನೆ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಗಂಗಾ ಪುನರುಜ್ಜೀವನ ಕುರಿತ ೧೬ ನೇ ಕಾರ್ಯಪಡೆ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಸಾಧನೆಗಳ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ ಸಚಿವರು, ಕಳೆದ ವರ್ಷದಲ್ಲಿ ಕಾರ್ಯಪಡೆ ಕೈಗೆತ್ತಿಕೊಂಡ ಸುಮಾರು ೮೦ ಪ್ರತಿಶತದಷ್ಟು ಸಮಸ್ಯೆಗಳನ್ನು ಯಶಸ್ವಿಯಾಗಿ ಪರಿಹರಿಸಲಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಈ ಕಾರ್ಯಗಳು ಗಂಗಾ ಪುನರುಜ್ಜೀವನಕ್ಕೆ ಬಲವಾದ ಅಡಿಪಾಯ ಹಾಕುತ್ತಿವೆ. ವಿವಿಧ ಕ್ಷೇತ್ರಗಳಲ್ಲಿನ ಪ್ರಯತ್ನಗಳು ಗಂಗಾ ಮತ್ತು ಅದರ ಉಪನದಿಗಳಿಗೆ ಸಮಗ್ರ ಚೌಕಟ್ಟನ್ನು ಸೃಷ್ಟಿಸುತ್ತವೆ ಎಂದು ಅವರು ಹೇಳಿದರು.

ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಜೌಗು ಪ್ರದೇಶಗಳ ಸ್ಥಿತಿಯ ಮೇಲೆ ವಿಶೇಷ ಗಮನ ಹರಿಸಲಾಗಿದೆ ಎಂದು ಮಾಹಿತಿ ನೀಡಿದ ಅವರು, ಅಲ್ಲಿ ಕ್ರಮವಾಗಿ ೨೮೨ ಮತ್ತು ೩೮೭ ಜೌಗು ಪ್ರದೇಶಗಳನ್ನು ಪರಿಶೀಲಿಸಿ, ಉತ್ತರ ಪ್ರದೇಶದಲ್ಲಿ ೪೦ ಮತ್ತು ಬಿಹಾರದಲ್ಲಿ ೧೯ ಹೆಚ್ಚಿನ ಆದ್ಯತೆಯ ಜೌಗು ಪ್ರದೇಶಗಳನ್ನು ಗುರುತಿಸಲಾಗಿದೆ ಎಒದು ತಿಳಿಸಿದರು .ಈ ೫೯ ಜೌಗು ಪ್ರದೇಶಗಳಿಗೆ ಕಾನೂನು ರಕ್ಷಣೆ ನೀಡಲು ಎರಡೂ ರಾಜ್ಯಗಳನ್ನು ಸಚಿವರು ಒತ್ತಾಯಿಸಿದರು. ಗಂಗಾ ಜಲಾನಯನ ಪ್ರದೇಶದ ಎಲ್ಲಾ ರಾಜ್ಯಗಳು ಕೇಂದ್ರ ಜಲ ಆಯೋಗದ ತಾಂತ್ರಿಕ ಮಾರ್ಗಸೂಚಿಗಳನ್ನು ಜಾರಿಗೆ ತರಬೇಕೆಂದು ಸಚಿವರು ಒತ್ತಾಯಿಸಿದರು. ಸಭೆಯಲ್ಲಿ ವಿವಿಧ ಸಚಿವಾಲಯಗಳು ಮತ್ತು ರಾಜ್ಯ ಸರ್ಕಾರಗಳ ಪ್ರಮುಖ ಪಾಲುದಾರರು ಉಪಸ್ಥಿತರಿದ್ದರು.

><><><><

ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ನವದೆಹಲಿಯಲ್ಲಿ ನಡೆಯಲಿರುವ ಭಾರತ ಅಂತರರಾಷ್ಟ್ರೀಯ ವಿಜ್ಞಾನ ಉತ್ಸವ ಐಐಎಸ್‌ಎಫ್ ಸಿದ್ಧತೆಗಳನ್ನು ನಿನ್ನೆ ಪರಿಶೀಲಿಸಿದರು. ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವರು, ಸರಕು ಯೋಜನೆಗಳು, ಪ್ರದರ್ಶನ ವಿನ್ಯಾಸಗಳು ಮತ್ತು ವಿವಿಧ ಸಂಸ್ಥೆಗಳಾದ್ಯಂತ ಕಾರ್ಯಕ್ರಮಗಳ ಸಂಯೋಜನೆಯನ್ನು ಪರಿಶೀಲಿಸಿದರು. ಈ ವರ್ಷ ಚಂಡೀಗಢದಲ್ಲಿ ನಡೆಯಲಿರುವ ಉತ್ಸವದಲ್ಲಿ ಶಾಲೆಗಳು ಮತ್ತು ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಗುರಿಯಿಟ್ಟುಕೊಂಡು ನಿರಂತರ ಜಾಗೃತಿ ಅಭಿಯಾನವನ್ನು ಪ್ರಾರಂಭಿಸಲು ಎಲ್ಲಾ

ಇಲಾಖೆಗಳಿಗೆ ಅವರು ಸೂಚನೆ ನೀಡಿದರು. ಸಭೆಯ ಸಂದರ್ಭದಲ್ಲಿ, ಐಐಎಸ್‌ಎಫ್ ಕಾರ್ಯಕ್ರಮಗಳಲ್ಲಿ ನವೋದ್ಯಮಗಳನ್ನು ಸೇರಿಸಿಕೊಳ್ಳುವ ಮೂಲಕ ಅವುಗಳನ್ನು ಬೆಂಬಲಿಸುವ ಮತ್ತು ಪೋಷಿಸುವ ಅಗತ್ಯವನ್ನು ಸಚಿವರು ಒತ್ತಿ ಹೇಳಿದರು. ಐಐಎಸ್‌ಎಫ್, ದೇಶದ ಅತಿದೊಡ್ಡ ವಿಜ್ಞಾನ ಸಂಪರ್ಕ ವೇದಿಕೆಗಳಲ್ಲಿ ಒಂದಾಗಿ ವಿಕಸನಗೊಂಡಿದೆ, ವಿಜ್ಞಾನವನ್ನು ಸಾರ್ವಜನಿಕರ ಹತ್ತಿರಕ್ಕೆ ತರಲು ಪ್ರದರ್ಶನಗಳು, ಯುವ ವೇದಿಕೆಗಳು, ನವೋದ್ಯಮ ಮಂಟಪಗಳು ಮತ್ತು ಸಂವಾದಾತ್ಮಕ ವಿಜ್ಞಾನ ರಂಗಮಂದಿರಗಳನ್ನು ಸಂಯೋಜಿಸುತ್ತದೆ ಎಂದು ಸಚಿವಾಲಯ ತಿಳಿಸಿದೆ.

><><><><

ಭಾರತದ ಚಿಲ್ಲರೆ ಹಣದುಬ್ಬರ ಕಳೆದ ಒಂದು ವರ್ಷದಿಂದ ಸ್ಥಿರವಾಗಿದ್ದು ೨೦೪೭ರ ವಿಕಸಿತ ಭಾರತ ಗುರಿ ಸಾಕಾರಗೊಳಿಸಲು ಇದು ಅತ್ಯಂತ ಅಗತ್ಯ ಎಂದು ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ನಿಧಿ ಖರೆ ತಿಳಿಸಿದ್ದಾರೆ. ನವದೆಹಲಿಯಲ್ಲಿ ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಎಫ್‌ಐಸಿಸಿಐ ಆಯೋಜಿಸಿದ್ದ ೩ನೇ ಕೈಗಾರಿಕೆ ೪.೦ ಉತ್ಕೃಷ್ಟತಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತ ಶೇಕಡಾ ೭ರಿಂದ ೮ರಷ್ಟು ಬೆಳವಣಿಗೆ ದರಕ್ಕೆ ಸಾಕ್ಷಿಯಾಗಿದೆ. ನೇರ ಹಣ ವರ್ಗಾವಣೆ-ಡಿಬಿಟಿ, ಏಕೀಕೃತ ಪಾವತಿ ವ್ಯವಸ್ಥೆ-ಯುಪಿಐ, ಆಧಾರ್ ದೃಢೀಕರಣ ಮತ್ತು ಇತ್ತೀಚಿನ ಜಿಎಸ್‌ಟಿ ಸುಧಾರಣೆಯಂತಹ ಉಪಕ್ರಮಗಳು ದೇಶದಲ್ಲಿ ಕ್ರಾಂತಿಯನ್ನುಂಟು ಮಾಡಿವೆ ಎಂದರು. ಅಂತಾರಾಷ್ಟ್ರೀಯ ಮಟ್ಟ ಮಾತ್ರವಲ್ಲದೆ, ಭಾರತೀಯ ಪರಿಸ್ಥಿತಿ ಮತ್ತು ವ್ಯವಸ್ಥೆಗೆ ಹೊಂದಿಕೊಳ್ಳುವಂತಹ ಮಾನದಂಡಗಳನ್ನು ರೂಪಿಸಲು ತಾಂತ್ರಿಕ ಸಮಿತಿಗಳಲ್ಲಿ ತೊಡಗಿಸಿಕೊಳ್ಳುವಂತೆ ಉದ್ಯಮ ನಾಯಕರಿಗೆ ಕಾರ್ಯದರ್ಶಿ ನಿಧಿ ಖರೆ, ಇದೇ ವೇಳೆ ಕರೆ ನೀಡಿದರು.

><><><><

ಸ್ವಸ್ಥ ನಾರಿ ಸಶಕ್ತ ಪರಿವಾರ ಅಭಿಯಾನದಡಿ ಈವರೆಗೆ ದೇಶಾದ್ಯಂತ ೯ ಲಕ್ಷಕ್ಕೂ ಅಧಿಕ ಆರೋಗ್ಯ ಶಿಬಿರಗಳನ್ನು ಆಯೋಜಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ.ನಡ್ಡಾ ತಿಳಿಸಿದ್ದಾರೆ. ನವದೆಹಲಿಯಲ್ಲಿ ಖಾಸಗಿ ಸುದ್ದಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅವರು, ಈಗಾಗಲೇ ೩.೬ ಕೋಟಿಗೂ ಹೆಚ್ಚು ಜನರನ್ನು ತಪಾಸಣೆಗೆ ಒಳಪಡಿಸಲಾಗಿದ್ದು, ಅಕ್ಟೋಬರ್ ೨ರೊಳಗೆ ಈ ಸಂಖ್ಯೆ ೪ ಕೋಟಿ ಗಡಿದಾಟುವ ನಿರೀಕ್ಷೆ ಇದೆ ಎಂದು ಹೇಳಿದರು. ಪ್ರದಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಹಾಗೂ ದೇಶದ ಆರೋಗ್ಯ ನೀತಿ ಕೇವಲ ಚಿಕಿತ್ಸಾ ಕೇಂದ್ರಿತ ದೃಷ್ಟಿಕೋನದಿಂದ ವ್ಯಾಧಿ ತಡೆಗಟ್ಟುವಿಕೆ, ಆರೋಗ್ಯ ಜಾಗೃತಿ, ರೋಗ ನಿರ್ಣಯ ಮತ್ತು ಚಿಕಿತ್ಸೆ ಒಳಗೊಂಡ ಸಮಗ್ರ ಮಾದರಿಯತ್ತ ಪರಿವರ್ತಿತಗೊಂಡಿದೆ ಎಂದು ಮಾಹಿತಿ ನೀಡಿದರು.

><><><><

೨೦೨೫ ರ ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಗುವಾಹಟಿಯ ಬರ್ಸಪಾರ ಕ್ರಿಕೆಟ್ ಕ್ರೀಡಾಂಗಣದಲ್ಲಿಂದು ಚಾಲನೆ ದೊರೆಯಲಿದೆ. ಉದ್ಘಾಟನಾ ಪಂದ್ಯಆತಿಥೇಯ ಭಾರತ ಮತ್ತು ಶ್ರೀಲಂಕಾ ತಂಡಗಳು ಮುಖಾಮುಖಿಯಾಗಲಿದ್ದು, ಈ ಪಂದ್ಯ ಮಧ್ಯಾಹ್ನ ೩ ಗಂಟೆಗೆ ಆರಂಭವಾಗಲಿದೆ. ಭಾರತೀಯ ಮಹಿಳಾ ಕ್ರಿಕೆಟ್ ತಂಡವು ತಮ್ಮ ಚೊಚ್ಚಲ ಅಂತಾರಾಷ್ಟ್ರೀಯ ಕ್ರಿಕೆಟ್

ಮಂಡಳಿ ಐಸಿಸಿ ಪ್ರಶಸ್ತಿಗಾಗಿ ಸೆಣಸಾಟ ನಡೆಸಲಿದೆ. ಈ ಬಾರಿಯ ಮಹಿಳಾ ವಿಶ್ವಕಪ್‌ನಲ್ಲಿ ಆಸ್ಟ್ರೇಲಿಯಾ, ಇಂಗ್ಲೆಂಡ್, ಭಾರತ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ಬಾಂಗ್ಲಾದೇಶ ಮತ್ತು ಪಾಕಿಸ್ತಾನ ಸೇರಿದಂತೆ ೮ ತಂಡಗಳು. ಭಾರತದ ನಾಲ್ಕು ಸ್ಥಳಗಳಲ್ಲಿ ಮತ್ತು ಶ್ರೀಲಂಕಾದ ಕೊಲಂಬೊದ ಒಂದು ಸ್ಥಳದಲ್ಲಿ ರೌಂಡ್-ರಾಬಿನ್ ಸ್ವರೂಪದಲ್ಲಿ ೨೮ ಲೀಗ್ ಪಂದ್ಯಗಳಲ್ಲಿ ಸ್ಪರ್ಧಿಸಲಿವೆ. ಸಾಂಪ್ರದಾಯಿಕ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ನಡುವಿನ ಪಂದ್ಯ, ಅಕ್ಟೋಬರ್ ೫ ರಂದು ಕೊಲಂಬೊದಲ್ಲಿ ನಡೆಯಲಿದೆ. ಗುಂಪು ಹಂತದ ಅಂತ್ಯದಲ್ಲಿ ಅಗ್ರ ನಾಲ್ಕು ತಂಡಗಳು ಸೆಮಿಫೈನಲ್‌ಗೆ ಮುನ್ನಡೆಯಲಿವೆ. ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ, ಮಹಿಳಾ ವಿಶ್ವಕಪ್ ಇತಿಹಾಸದಲ್ಲಿ ಏಳು ಪ್ರಶಸ್ತಿಗಳೊಂದಿಗೆ ಅತ್ಯಂತ ಯಶಸ್ವಿ ತಂಡವಾಗಿದೆ. ಇಂಗ್ಲೆಂಡ್ ನಾಲ್ಕು ಬಾರಿ ಮತ್ತು ನ್ಯೂಜಿಲೆಂಡ್ ಒಮ್ಮೆ ಈ ಪ್ರಶಸ್ತಿಯನ್ನು ಗೆದ್ದಿದೆ.

><><><><

ಏಷ್ಯಾ ಕಪ್ ೨೦೨೫ರ ಫೈನಲ್ ಪಂದ್ಯದ ನಂತರ ಟ್ರೋಫಿ ನೀಡುವ ಕುರಿತಂತೆ ನಡೆದ ವಿವಾದಾತ್ಮಕ ಘಟನೆಯನ್ನು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಖಂಡಿಸಿದ್ದಾರೆ. ಬರುವ ನವೆಂಬರ್‌ನಲ್ಲಿ ದುಬೈನಲ್ಲಿ ನಡೆಯುವ ಐಸಿಸಿ ಸಮ್ಮೇಳನದಲ್ಲಿ ಅಧಿಕೃತವಾಗಿ ಆಕ್ಷೇಪ ವ್ಯಕ್ತಪಡಿಸಲಾಗುವುದು ಎಂದು ಅವರು ದೃಢಪಡಿಸಿದ್ದಾರೆ. ಭಾರತ ಪಾಕಿಸ್ತಾನವನ್ನು ಐದು ವಿಕೆಟ್‌ಗಳಿಂದ ಸೋಲಿಸಿದ ವೇಳೆ ಪಾಕಿಸ್ತಾನ ಕ್ರಿಕೆಟ್ ಮಂಡಳಿಯ ಅಧ್ಯಕ್ಷ ಮತ್ತು ಏಷ್ಯನ್ ಕ್ರಿಕೆಟ್ ಸಮಿತಿ ಅಧ್ಯಕ್ಷ ಮೊಹ್ಸಿನ್ ನಕ್ವಿ, ಟ್ರೋಫಿಯನ್ನು ತೆಗೆದುಕೊಂಡು ಹೋಗಿದ್ದು, ವಿವಾದಕ್ಕೆ ಎಡೆಮಾಡಿಕೊಟ್ಟಿತು.

><><><><